ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

# ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಕಂದಾಯ ಇಲಾಖೆ ಹಾಗೂ ನೋಡಲ್ ಅಧಿಕಾರಿ, ಪದನಿಮಿತ್ತ ಕಾರ್ಯದರ್ಶಿಗಳು (ಆರ್ಥಿಕ ಅಪರಾಧಗಳು)ರವರ ಕಾರ್ಯಾಲಯ

2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560 027. ದೂರವಾಣಿ 080-22109665

ಸಂಖ್ಯೆ:ಚುನಾವಣೆ.ವಿವ/08/2025-26 ದಿನಾಂಕ:13-11-2025

## ಅಧಿಕೃತ ಜ್ಞಾಪನ

**ವಿಷಯ:** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ., ಬೆಂಗಳೂರು ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಕರಡು ಮತದಾರರ ಪಟ್ಟಿ ಪ್ರಕಟಿಸುವ ಕುರಿತು.

**ಉಲ್ಲೇಖ:1.** ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಪ್ರಾ/ ಆಡಳಿತ/ಅ.ಸ.ಸಂ.ಚು.ನೇ/05/2025-26 ದಿನಾಂಕ:04-07-2025.

**2.** ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ., ಬೆಂಗಳೂರು ಇವರ ಪತ್ರ ಸಂಖ್ಯೆ:ಪಬ್ಯಾಮ/ಚುನಾವಣೆ/466/2025-26 ದಿ:06-11-2025.

********

ಸಹಕಾರ ಚುನಾವಣಾ ಪ್ರಾಧಿಕಾರದ ಉಲ್ಲೇಖ(1)ರ ಆದೇಶದಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರುರವರನ್ನು 2026ನೇ ಸಾಲಿನಲ್ಲಿ ಅವರ ಕಾರ್ಯ ವ್ಯಾಪ್ತಿಯಲ್ಲಿ ಒಳಪಡುವ ಅಪೆಕ್ಸ್ ಸಹಕಾರ ಸಂಘಗಳಿಗೆ ನಡೆಯುವ ಆಡಳಿತ ಮಂಡಲಿ ಸದಸ್ಯರುಗಳ, ಸಾಮಾನ್ಯ, ಖಾಲಿಬಿದ್ದ ಸ್ಥಾನಗಳ ಮತ್ತು ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳಿಗೆ ಚುನಾವಣೆಗಳನ್ನು ನಡೆಸಲು ಚುನಾವಣಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿರುತ್ತದೆ.

ಅದರಂತೆ ಚುನಾವಣಾಧಿಕಾರಿಗಳು ಚುನಾವಣಾ ದಿನಾಂಕಕ್ಕೆ ಕನಿಷ್ಠ ಐವತ್ತು (50) ದಿನಗಳ ಪೂರ್ವದಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ., ಬೆಂಗಳೂರು ಇವರು ಉಲ್ಲೇಖ(2)ರನ್ವಯ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಮತ್ತು ಮತದಾನದ ಹಕ್ಕನ್ನು ಹೊಂದಿರದ ಅನರ್ಹ ಸದಸ್ಯರ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಗಳನ್ನು, ಅನುಮೋದಿತ ಬೈಲಾದ ಪ್ರತಿಯೊಂದಿಗೆ ಸಲ್ಲಿಸಿರುತ್ತಾರೆ.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ., ಬೆಂಗಳೂರು ಇವರು ಸಲ್ಲಿಸಿರುವ ಕರಡು ಮತದಾರರ ಪಟ್ಟಿಗಳನ್ನು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ, ಚುನಾವಣೆ ನಡೆಸಲು ನಿಯಮಾನುಸಾರ ಅಗತ್ಯವಿರುವ ಕಾಲಾವಕಾಶವನ್ನು ಗಮನದಲ್ಲಿಟ್ಟುಕೊಂಡು **ದಿನಾಂಕ:04-01-2026**ರಂದು ಚುನಾವಣಾ ದಿನಾಂಕವನ್ನು ನಿಗದಿಪಡಿಸಿ, **ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ., ಬೆಂಗಳೂರು** ಇದರ ಚುನಾವಣೆ ನಡೆಸುವ ಬಗ್ಗೆ **ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಅನರ್ಹ ಸದಸ್ಯ ಸಂಘಗಳ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಯನ್ನು** ಈ ಮೂಲಕ ಸಂಬಂಧಪಟ್ಟವರ ಗಮನಕ್ಕೆ ಪ್ರಕಟಿಸಲಾಗಿದೆ.

14/11/25

Scanned with OKEN Scanner

**ಈ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ದಿನಾಂಕದಿಂದ ಚುನಾವಣಾ ದಿನಾಂಕದ ಪೂರ್ವದ ಮೂವತ್ತು(30) ದಿನಗಳ ಮೊದಲು ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಿದೆ. ಆಕ್ಷೇಪಣೆ ಸಲ್ಲಿಸಬಯಸುವ ಸದಸ್ಯರು/ ಸದಸ್ಯ ಸಂಘಗಳು, ಚುನಾವಣಾಧಿಕಾರಿಗಳಿಗೆ ಅಥವಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ., ಬೆಂಗಳೂರು ಇವರಿಗೆ ನಿಗದಿತ ಕಾಲಾವಧಿಯಲ್ಲಿ ನೇರವಾಗಿ ತಮ್ಮ ನಿರ್ದಿಷ್ಟ ಆಕ್ಷೇಪಣೆಗಳನ್ನು ಅಗತ್ಯ ಪೂರಕ ದಾಖಲೆಗಳೊಂದಿಗೆ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ.** ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ., ಬೆಂಗಳೂರುರವರು ಈ ವಿಷಯವಾಗಿ ಸ್ವೀಕೃತವಾಗುವ ಆಕ್ಷೇಪಣೆಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಮುಂದಿನ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ., ಬೆಂಗಳೂರುರವರು ಇದರೊಂದಿಗೆ ಲಗತ್ತಿಸಲಾಗಿರುವ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಅನರ್ಹ ಸದಸ್ಯರ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಗಳನ್ನು ಮಹಾಮಂಡಳದ ಸೂಚನಾ ಫಲಕದಲ್ಲಿ, ಸದಸ್ಯ ಸಂಘಗಳ ಕಛೇರಿಗಳಲ್ಲಿ ಹಾಗೂ ನಿಯಮಾನುಸಾರ ಅನ್ವಯಿಸುವ ಇತರೆ ಶಾಖಾ ಕಛೇರಿಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಂಡು, ಪ್ರಕಟಿಸಿದ ಬಗ್ಗೆ ಈ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಿದೆ.

**ಪ್ರಾದೇಶಿಕ ಆಯುಕ್ತರು,**
**ಬೆಂಗಳೂರು ವಿಭಾಗ, ಬೆಂಗಳೂರು**
**ಹಾಗೂ ಜಿಲ್ಲಾ ಚುನಾವಣಾಧಿಕಾರಿ.**

**ಪ್ರತಿಯನ್ನು:-**

(1) ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರುರವರಿಗೆ ಕರಡು ಮತದಾರರ ಪಟ್ಟಿಯನ್ನು ಲಗತ್ತಿಸಿ ಮಾಹಿತಿಗಾಗಿ ಕಳುಹಿಸಿದೆ.

(2) ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ., ನಂ. 132, ಕೆ.ಹೆಚ್. ರಸ್ತೆ, ಬೆಂಗಳೂರು-560027 ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

(3) ಕಛೇರಿ ಪ್ರತಿ.

Scanned with OKEN Scanner